



ಸಮಾಲೋಚಕರಿಗಾಗಿ ಹುಡುಕಾಡುತ್ತಿರುತ್ತಾರೆ. ಈ ಹುಡುಕಾಟದ ಸಂದರ್ಭದಲ್ಲಿ ಮನಸ್ಸಿನಲ್ಲಿರುವ ಭಾವನೆಯೊಂದೇ: ತಾನು ಹೀಗೆ ಸಮಸ್ಯೆ ಎದುರಿಸುತ್ತಿದ್ದೇನೆಂಬುದು ಇತರರಿಗೆ ಗೊತ್ತಾಗದೇ ಇರಲಿ, ಮಾನಸಿಕ ಸಮಸ್ಯೆ ಇರುವ ವ್ಯಕ್ತಿ ಎಂದು ಇತರರು ತನಗೆ ಹಣೆಪಟ್ಟಿ ಹಚ್ಚದೇ ಇರಲಿ.

ಸಮಾಲೋಚನೆ ನಡೆಸುವಾಗ ಖಾಸಗಿತನ ಎಷ್ಟೊಂದು ಮುಖ್ಯವಾಗಿರುತ್ತದೆ ಎನ್ನುವುದನ್ನು ಕಥೆಗಾರ ಹಾಗೂ ಸಮಾಲೋಚಕರೂ ಆಗಿರುವ ವಸುಧೇಂದ್ರ ವಿವರಿಸುವುದು ಹೀಗೆ: ‘ಒಂದೇ ಅವಧಿಯಲ್ಲಿ ಸಮಾಲೋಚನೆಯು ಫಲಕೊಡುವುದಿಲ್ಲ. ಈ ಸಮಾಲೋಚಕನ ಬಳಿ ತಾನು ತನ್ನ ಅಂತರಂಗವನ್ನು ಬಿಚ್ಚಿಡಬಹುದು, ಇಲ್ಲಿ ಹೇಳಿಕೊಳ್ಳುವ ವಿಷಯಗಳು ತನ್ನ ಸರೀಕರಿಗೆ, ಬಂಧುಗಳಿಗೆ ತಿಳಿಯುವುದಿಲ್ಲ ಎಂಬ ವಿಶ್ವಾಸ ಮೂಡಿದ ಬಳಿಕವಷ್ಟೇ ವ್ಯಕ್ತಿ ಅನಾವರಣಗೊಳ್ಳುತ್ತಾ ಹೋಗುತ್ತಾನೆ. ನಾನು ಸಮಾಲೋಚನೆ ನಡೆಸುವುದು ‘ಎಲ್‌ಜಿಬಿಟಿ’ ಸಮುದಾಯದ ವ್ಯಕ್ತಿಗಳಿಗೆ ಮಾತ್ರ. ಸಮಾಲೋಚಕನ ಬಗ್ಗೆ ವಿಶ್ವಾಸ ಮೂಡಿದ ಮೇಲಷ್ಟೇ ಅವರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ.’’